# ಕೃತಿಕಾರ

ಲೋಕದ ಕೃತಿಕಾರರು ನಮ್ಮ ದೇಶದಲ್ಲಿ ಸಹಸ್ರಾರು ಮಂದಿ ಹಿಂದೆ ಇದ್ದರು, ಈಗಲೂ ಇದ್ದಾರೆ. ಸಮಗ್ರ ಭಾರತದಲ್ಲಿ ಅಂದಿನಿಂದ, ಎಂದಿನಿಂದಲೂ ಕೃತಿಕಾರರಿಂದ ಕೃತಿಗಳು ಹುಟ್ಟುತ್ತಲೇ ಇವೆ. ಕೃತಿಗಳ ಮೂಲಕ ಕೃತಿಕಾರರು ಬದುಕಿದ್ದಾರೆ. ಎಷ್ಟು ಕೃತಿಗಳೊ ಅಷ್ಟು ಕೃತಿಕಾರರು; ಎಷ್ಟು ಪ್ರಕಾರಗಳೊ ಅಷ್ಟಷ್ಟು ಪ್ರಕಾರಗಳು. ಸಂಸ್ಕೃತದಲ್ಲಿ ಮಾತೊಂದುಂಟು: 'ತ ಏವ ಪದಸಂಘಾತಾಃ, ತ ಏವಾರ್ಥ ವಿಭೂತಯಃ| ತಥಾಪಿ ನವ್ಯಂ ಭವತಿ, ಕಾವ್ಯಂ ಗ್ರಥನಕೌಶಲಾತ್' ವಾಲ್ಮೀಕಿಯಿಂದ ಪ್ರಾರಂಭಗೊಂಡ ಕೃತಿರಚನೆಗಳು ಇನ್ನೂ ರಚನೆಗೊಳ್ಳುತ್ತಿವೆ. ಇಲ್ಲೊಂದು ಸ್ವಾರಸ್ಯವುಂಟು. 'ಅವವೇ ಪದಸಮೂಹಗಳು. ಅವವೇ ಅರ್ಥವಸ್ತು ವೈವಿಧ್ಯಗಳು. ಆದರೆ, ಅವು ನವೋದಿತವಾಗಿಯೇ ನಮಗೆ ಕಾಣುವುದಲ್ಲ–ಇದಕ್ಕೆ ಕಾರಣವೇನು? ಗ್ರಂಥರಚನಾ ಕೌಶಲವೇ ಇದಕ್ಕೆ ಕಾರಣ'! ನಮ್ಮ ಮುಂದಿನ ಸಮಸ್ತ ಪದಾರ್ಥ ಪ್ರಪಂಚ ಸಾಮಾನ್ಯರಿಗೆ ಸಾಮಾನ್ಯವಾಗಿಯೇ ಕಾಣುತ್ತಿರುವುದುಂಟು. ಆದರೆ, ಕವಿಯೊಬ್ಬನ ಕಣ್ಣಿಗೆ ಅವು ವಿಶೇಷವಾಗಿಯೇ ಕಾಣುತ್ತದೆ! ಕವಿಗಳು ತಮ್ಮ ಪ್ರತಿಭೆಯ ಬೆಳಕಿನಿಂದ ಮಾಯಾ ಪ್ರಪಂಚವನ್ನು ಸೃಷ್ಟಿಸಿ ಬಿಡುತ್ತಾರೆ. ಇದು ವಿಸ್ಮಯವೇ ಸರಿ. ಸೂರ್ಯನು ಪೂರ್ವದಲ್ಲಿ ಮೂಡುತ್ತಾನೆ. ಎಂಬ ಅಂಶವೊಂದು ಬೇಂದ್ರೆಗೆ 'ಮೂಡಲ ಮನೆಯ ಮುತ್ತಿನ ನೀರಿನ ಎರಕವ ಹೊಯ್ದ' ಎಂದು ಕಂಡರೆ; ಕುವೆಂಪು ಅವರಿಗೆ 'ಕುಂಕುಮಧೂಳಿಯ ದಿಕ್ತಟವೇದಿಯ ಓಕುಳಿಯಲಿ ಮಿಂದೇಳುವನು' ಆಗಿ ಕಾಣುತ್ತಾನೆ. ಪುತಿನ ಅವರಿಗೆ 'ಮೂಡಣ ಕಣಿವೆಯ ಹಿಮದವಕುಂಠನ, ರವಿಕರಸ್ಪರ್ಶಕೆ ಜಾರುತಿದೆ' ಎಂದು ಅನಿಸುತ್ತದೆ.

ಕುವೆಂಪು, ಬೇಂದ್ರೆ, ಪುತಿನ ಅವರ ಕವಿತೆಯ ಸಾಲುಗಳು ನಮ್ಮ ಮನಸ್ಸಿನ ಭಾವಲೋಕದಲ್ಲಿ ಬೆಳೆಯುತ್ತಲೇ ಹೋಗುತ್ತವೆ. ನಮ್ಮ ಸಹೃದಯಲೋಕವಂತೂ ಸದಾ ಹಿಗ್ಗುತ್ತಲೇ ಇರುತ್ತದೆ. ನಾವು ವಿದ್ಯಾರ್ಥಿಗಳಾಗಿದ್ದಾಗ ಕೇಳಿದ ಕಾವ್ಯದ ಸಾಲುಗಳು, ಉದ್ದಕ್ಕೂ ನಮ್ಮೊಡನೆ ಬೆಳೆಯುತ್ತ ಹೋಗುತ್ತವೆ. ನಮ್ಮ ನಮ್ಮ ಅನುಭವಗಳು ಮತ್ತು ಸೂಕ್ಷ್ಮವಾದ ಸರ್ವೇಂದ್ರಿಯಗಳು ಪಕ್ವಗೊಂಡಂತೆಲ್ಲ ಹೆಚ್ಚಿನ ಅರ್ಥವಲಯಗಳು ಉಂಟಾಗುತ್ತವೆ. ಇಂಥ ಅಪೂರ್ವ ಸಾಲುಗಳನ್ನು ಬರೆಯುವ ಕೃತಿಕಾರ ಮೂಲತಃ ಪ್ರತಿಭೆ ಉಳ್ಳವನಾಗಿರಬೇಕಷ್ಟೆ. ಅವನಲ್ಲಿ ಮಾತು ಮಾಂತ್ರಿಕ ಆಗುವುದುಂಟು. ಇಂಥವನು ಅಪಾರವಾದ ಓದನ್ನು ಪಡೆದಿರಬೇಕು. ಹನ್ನೊಂದನೆಯ ಶತಮಾನದಲ್ಲಿ ಕ್ಷೇಮೇಂದ್ರನೆಂಬ ಕವಿ–ಲಾಕ್ಷಣಿಕನೊಬ್ಬನಿದ್ದ. ಅವನು 'ಕವಿಕಂಠಾಭರಣ' ಎಂಬ ಚಿಕ್ಕ ಕೃತಿಯೊಂದನ್ನು ಬರೆದಿದ್ದಾನೆ. ಅವನು ಕೃತಿಕಾರನಿಗೆ ಇರಬೇಕಾದ ನೂರುಗುಣಗಳ ಪಟ್ಟಿಯೊಂದನ್ನು ಕೊಡುತ್ತಾನೆ. ಆ ಪಟ್ಟಿಯೂ ಸ್ವಾರಸ್ಯಕರವಾಗಿದೆ. ಅವನು ಹೇಳಿರುವ ನೂರುಗುಣಗಳನ್ನು ಸ್ವಲ್ಪಮಟ್ಟಿಗೆ ತಿಳಿಯಬಹುದು.

ಕವಿಯಾದವನು ಪ್ರತಿನಿತ್ಯ ಗಣೇಶನನ್ನು ಪೂಜಿಸುತ್ತಿರಬೇಕು. ಅವನು ವಿದ್ಯೆಯ ಒಡೆಯನಷ್ಟೆ. ಆಗಾಗ್ಗೆ ನಿಯಮಬದ್ಧವಾದ ವ್ರತದ ಆಚರಣೆಯನ್ನು ಕವಿ ಇಟ್ಟುಕೊಂಡಿರಬೇಕು. ಸರಸ್ವತಿಯ ಯಾಗವನ್ನು ಮಾಡುತ್ತಿರಬೇಕು. ಕವಿಯಾದವನಿಗೆ ಇದು ಸರಿಯಾದದ್ದು, ಇದು ಸರಿಯಲ್ಲ ಎಂಬ ವಿವೇಚನೆಯೂ ಇರಬೇಕು. ಆಗಾಗ್ಗೆ ಹಿಂದಿನ ಮಹಾಕವಿಗಳ ಮಹಾಕಾವ್ಯಗಳನ್ನು ಅಭ್ಯಾಸ ಮಾಡುತ್ತಿರಬೇಕು. ಇಷ್ಟು ಮಾತ್ರವಲ್ಲ ಕೆಲವು ಹೆಚ್ಚು ಬಳಕೆಯಲ್ಲಿ ಇಲ್ಲದ ಹಳೆಯ ಕೃತಿಗಳನ್ನು ಅನುಸಂಧಾನ ಮಾಡುತ್ತಿರಬೇಕು. ಕೃತಿರಚನೆಗೆ ಪ್ರೌಢಿಮೆಯೂ ಅಗತ್ಯ. ಛಂದೋಜ್ಞಾನವಂತೂ ಬೇಕೇ ಬೇಕು. ಕಾವ್ಯಕ್ಕೆ ಛಂದಸ್ಸೇ ಶರೀರ. ಆಗಾಗ್ಗೆ ಪ್ರಯತ್ನ ಪಟ್ಟು ಇತರೇತರ ವಿಚಾರಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿರಬೇಕು. ಓರಗೆಯವರು ಬರೆದದ್ದನ್ನು ಓದಬೇಕು. ಕಾವ್ಯ ಬರೆಯಲು ಸಾಹಿತ್ಯಕ್ಕೆ ಸಂಬಂಧಿಸಿದ ವಿದ್ಯೆಗಳ ಅಧ್ಯಯನ ಅಗತ್ಯ. ಉತ್ತಮ ಕೃತಿಕಾರರ ಸಹವಾಸ ಇಟ್ಟುಕೊಂಡಿರಬೇಕು. ಸೌಜನ್ಯಶೀಲವಾದ ನಡವಳಿಕೆಯ ಜತೆಗೆ, ಉತ್ತಮರ ಗೆಳೆತನವೂ ಇರಬೇಕು. ಪ್ರಸನ್ನವಾದ ಮನಸ್ಸು, ಉತ್ತಮ ವೇಷಭೂಷಣ, ನಾಟಕಗಳ ಅಭಿನಯವನ್ನು ನೋಡುತ್ತಿರಬೇಕು. ಆಗಾಗ್ಗೆ ಕೃತಿಕಾರರಿಗೆ ಕೊಡುಗೆ ನೀಡಬೇಕು. ಜನರ ನಡವಳಿಕೆಯನ್ನು ಗಮನಿಸುವುದಲ್ಲದೆ; ಇತಿಹಾಸದ ಗಮನವಿರಬೇಕು; ಯುದ್ಧದ ಪರಿಚಯ ಇರುವುದು ಅವಶ್ಯ. ಸ್ಮಶಾನ, ಕಾಡು, ಪಕ್ಷಿಗಳ ಗೂಡು–ಮನುಷ್ಯರು ವಾಸಿಸುವ ವಿವಿಧ ಬಗೆಯ ಮನೆಗಳನ್ನು ಗಮನಿಸುತ್ತಿರಬೇಕು. ಉತ್ತಮ ಆಹಾರ, ಸ್ವಸ್ಥವಾಗಿರುವುದು, ಬೇಗ ಏಳುವುದು, ಹಗಲು ನಿದ್ರೆ ಮಾಡದಿರುವುದು, ಪ್ರಾಣಿಗಳ ಸ್ವಭಾವ, ಸಮುದ್ರ–ಪರ್ವತಗಳ ವೀಕ್ಷಣೆ, ಋತುಗಳ ಅರಿವು, ಸ್ಥಳೀಯ ಭಾಷೆಗಳ ತಿಳಿವಳಿಕೆ, ಬರೆದದ್ದನ್ನು ಪುನಃ ಓದುವುದು, ಶಿಕ್ಷಣ ಸಂಸ್ಥೆಗಳ ಒಡನಾಟ, ಆತ್ಮಶ್ಲಾಘನೆಯ ನಿರಸನ, ಅಸೂಯೆ ಪಡದಿರುವುದು ಕವಿಗಿರಬೇಕಾದ ಗುಣಸಂಪತ್ತುಗಳು ಅವನು ಹಲವು ಗುರುಗಳಲ್ಲಿ ಶಿಷ್ಯನಾಗುವ ಮನೋಭಾವವನ್ನು ಹೊಂದಿರಬೇಕು. ನವರಸಗಳ ತಿಳಿವಳಿಕೆ, ಪಾಂಡಿತ್ಯ, ಪಟುತ್ವ, ನೂತನನೋಟ, ಗಾಂಭೀರ್ಯ, ಏಕಾಂತದಲ್ಲಿ ಆನಂದಾನುಭವ, ಅನ್ಯರ ಆಕ್ಷೇಪಗಳನ್ನು ಸಹಿಸುವುದು, ದೈನ್ಯತೆ ಪಡದಿರುವುದು, ಎಲ್ಲಾ ದೈವಗಳಲ್ಲೂ ಸಮಾನಭಾವ–ಇವೆಲ್ಲವೂ ಇರಬೇಕು. ಕಾವ್ಯಸಂಯೋಜನೆಯ ಅರಿವು, ಬೇರೊಬ್ಬರ ಅಭಿಪ್ರಾಯ ಆಲಿಸುವುದು, ರಸಪ್ರಜ್ಞೆ, ಉತ್ತಮ ಬರೆಹ ಇಂಥವೇ ನೂರುಗುಣಗಳು ಕೃತಿಕಾರನಿಗೆ ಇರಬೇಕು.

ಕೃತಿ ಮತ್ತು ಕೃತಿಕಾರ ಅಭಿನ್ನವೆಂಬುದು ಹಿಂದಿನವರ ಅಭಿಪ್ರಾಯವಾಗಿತ್ತು. ಇವು ಇಜ್ಜೋಡು ಪ್ರತಿಮೆ. ಕೃತಿ ರಚನೆಯ ಹಿಂದೆ ಕೃತಿಕಾರ ಅಪೂರ್ವಗುಣಗಳನ್ನು ಹೊಂದಿದ್ದರೆ ಅವನ ಕಾವ್ಯವೂ ಸಹೃದಯರ ಹೃದಯಕ್ಕೆ ಸಮೀಪವಾಗಲು ಸಾಧ್ಯವಾಗುತ್ತದೆಂಬುದು ಕ್ಷೇಮೇಂದ್ರನ ಆಶಯ! ಕಾಲ–ದೇಶ–ಭೇದಗಳು ಉಂಟಾದರೂ ಕವಿಪ್ರಜ್ಞೆ ಸಾತತ್ಯಗೊಳ್ಳುತ್ತಲೇ ಇರುತ್ತದೆಂಬುದು ಮಾತ್ರ ಅಷ್ಟೇ ಸತ್ಯ! ನಾವು ಆಧುನಿಕ ಕಾಲದಲ್ಲಿದ್ದರೂ ಕ್ಷೇಮೇಂದ್ರ ಹೇಳಿದ ಗುಣಗಳು ನಮಗೂ ಅಗತ್ಯ. ನೂತನ ಕೃತಿರಚನೆಗೆ ಇವೆಲ್ಲ ಬೇಕು ತಾನೆ?

■ **ಪುರಂಜೀವಿ**

## ಮಾತೇ ಮುತ್ತು

- ಅನುಭವದ ಪ್ರಯೋಜನ ಹೆಚ್ಚನ್ನು ಕಾಣುವುದರಲ್ಲಿಲ್ಲ. ತಿಳಿವಳಿಕೆಯಿಂದ ಕಾಣುವುದರಲ್ಲಿದೆ.

  —ಸರ್ ವಿಲಿಯಂ ಅಸ್ಲರ್

- ಯಾರ ಜ್ಞಾನವೂ ಅನುಭವದ ಮೆಟ್ಟಿಲು ಮೀರಿದುದಾಗಿರಲಾರದು.

  —ಜಾನ್‌ಲಾಕ್

- ಧರ್ಮದ ಕೊರಳಿಗೆ ಅನ್ನದ ಉರು... ಅನ್ನ ಯಜ್ಞದಿಂದ ಅದನ್ನು ಇಲ್ಲವಾಗಿಸಬೇಕು.

  —ದ.ರಾ. ಬೇಂದ್ರೆ

- ಅಹಂಕಾರ ಭೂತದ ಕಾಟಕ್ಕೆ ಒಳಗಾದವನ ವಿದ್ಯೆಯು ನೂರು ಮೂರ್ಖರ ವಿದ್ಯೆಯಂತಾಗುತ್ತದೆ.

  —ಕ್ಷೇಮೇಂದ್ರ

- ಸೋಮಾರಿ ಯಾರೆಂದರೆ ಎರಡು ಮುಳ್ಳುಗಳೂ ಇಲ್ಲದ ಗಡಿಯಾರದಂತೆ. ಅದು ನಡೆಯುತ್ತಿದ್ದರೂ, ನಿಂತಿದ್ದರೂ ಪ್ರಯೋಜನವಿಲ್ಲ.

  —ಕೂಪರ್

- ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನೂ ಇಲ್ಲ. ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೇ ಹಳೆಯವು.

  —ಮಹಾತ್ಮ ಗಾಂಧಿ

- ಆತ್ಮವಿಶ್ವಾಸ ಅತಿಯಾದಾಗ ಅದು ಅಹಂಕಾರವಾಗಿ ಮಾರ್ಪಡುತ್ತದೆ.

  —ಹಾ.ಮಾ. ನಾಯಕ

- ಈ ಗಂಡು– ಹೆಣ್ಣಿನ ಸಮಸ್ಯೆ ಅನಾದಿಯಾದದ್ದು, ಅನಂತವಾದದ್ದು.

  —ಎ.ಆರ್. ಕೃಷ್ಣಶಾಸ್ತ್ರಿ